Spl.C No.490/2018 PW-11

**ಕರ್ನಾಟಕ ಸರ್ಕಾರ**
**(ಸಿ.ಆರ್.ಪಿ.67)**

| |
|---|
| **ಹೇಳಿಕೆ ಹಾಳೆ** |
| **(ಆರ್.ಪಿ.ಸಂಖ್ಯೆ 57)** |
| **ನಮೂನೆ ಸಂಖ್ಯೆ 4** |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 490/2018**

**ಫ್ರಾಸಾ- 11 ಚಾಸಾ- 23**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಎಸ್ ರಾಜು |
| ತಂದೆಯ ಹೆಸರುಃ | : | ಲೇಟ್ ಶಾಂತರಾಜು |
| ವಯಸ್ಸುಃ | : | 63 ವರ್ಷ |
| ಉದ್ಯೋಗಃ | : | ನಿವೃತ್ತ ಡಿವೈ ಎಸ್ ಪಿ |
| ವಾಸ | : | ಮೈಸೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 18-03-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ದಿನಾಂಕ 12-4-2016ರಿಂದ 31-8-2017ರವರೆಗೆ ಹಾಸನದ ಎಸಿಬಿ ಕಛೇರಿಯಲ್ಲಿ ಪೊಲೀಸ್ ಉಪಾಧೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿನಾಂಕ 13-3-17ರಂದು ಬೆಳಿಗ್ಗೆ 10.15 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ದೂರುದಾರರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ನಿಪಿ-1ರಂತೆ ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 1/17 ರಂತೆ ಕೇಸು ದಾಖಲಿಸಿ ಪ್ರ.ವ.ವ.ಯನ್ನು ನಿಪಿ-51 ರಂತೆ ಸಿಬ್ಬಂದಿ ಮೂಲಕ ಮುಚ್ಚಿದ ಲಕೋಟೆಯಲ್ಲಿ ಕಳುಹಿಸಿರುತ್ತೇನೆ. ನಿಪಿ-1 ಮತ್ತು 51 ರಲಿ ನನ್ನ ರುಜುಗಳಿದ್ದು ಅವುಗಳನ್ನು ಕ್ರಮಾಗಿ ನಿಪಿ-1(ಬಿ) ಮತ್ತು 51(ಎ) ಎಂದು ಗುರುತಿಸಲಾಯಿತು.

3.ನಂತರ ಪಂಚರನ್ನು ಕಳುಹಿಸಿಕೊಡುವಂತೆ ಹಾಸನದ ಜಿಲ್ಲಾ ಆರೋಗ್ಯ ಮತ್ತು ಕುಟುಂಬಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ನಿಪಿ-52 ಮತ್ತು 53ರಂತೆ ಪತ್ರ ಬರೆದಿರುತ್ತೇನೆ. ಅವುಗಳಲ್ಲಿ ನನ್ನ ರುಜ ಇದ್ದು ನಿಪಿ-52(ಎ) ಮತ್ತು ನಿಪಿ-53(ಎ) ಎಂದು ಗುರುತಿಸಲಾಯಿತು. ಸದರಿ ಇಲಾಖೆಯಿಂದ ಚಾಸಾ-2 ಮತ್ತು 3 ರವರನ್ನು ಪಂಚರಾಗಿ ಕಳುಹಿಸಿಕೊಟ್ಟರು. ಸದರಿಯವರು ನನ್ನ ಮುಂದೆ 10.50ಕ್ಕೆ ಹಾಜರಾದರು, ಅವರಿಗೆ ನನ್ನ ಹಾಗೂ ಸಿಬ್ಬಂದಿಗಳ ಪರಿಚಯ ಮಾಡಿಕೊಟ್ಟೆನು ಹಾಗೂ ಠಾಣೆಯಲ್ಲಿದ್ದ ದೂರುದಾರರನ್ನು ತೋರಿಸಿ ಅವರ ಪರಿಚಯ ಮಾಡಿಕೊಟ್ಟೆನು ಹಾಗೂ ಸದರಿಯವರು ನೀಡಿದ ದೂರನ್ನು ಮತ್ತು ಪ್ರ.ವ.ವ.ಯಸಾರಾಂಶವನ್ನು ಅವರಿಗೆ ತಿಳಿಸಿ ಹಾಗೂ ಪ್ರ.ವ.ವ.

ಮತ್ತು ದೂರನ್ನು ನೀಡಿರುತ್ತೇನೆ. ಚಾಸಾ-2 ಮತ್ತು 3 ರವರು ಸದರಿ ದೂರಿನಲ್ಲಿ ಬರೆದಿರುವ ಅಂಶ ನಿಜವೇ ಎಂದು ದೂರುದಾರರನ್ನು ವಿಚಾರಿಸಿದರು, ಆಗ ದೂರುದಾರರು ನಿಜ ಎಂದು ತಿಳಿಸಿದರು.

4.ದೂರುದಾರರು ದೂರಿನೊಂದಿಗೆ ಮೊಬೈಲನ್ನು ಹಾಜರುಪಡಿಸಿ ಅದರಲ್ಲಿ ತಾನು ತನ್ನ ಮತ್ತು ಆರೋಪಿತರ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಂಡಿರುವುದಾಗಿ ಹೇಳಿ ಹಾಜರುಪಡಿಸಿದರು. ಸದರಿ ಮೊಬೈಲನ್ನು ಆನ್ ಮಾಡಿ ಅದರಲ್ಲಿರುವ ಸಂಭಾಷಣೆಯನ್ನು ಚಾಸಾ-2 ಮತ್ತು 3 ರವರಿಗೆ ಕೇಳಿಸಿದೆನು. ಸದರಿಯವರಿಗೆ ಪಂಚರಾಗಲು ಕೇಳಿಕೊಂಡೆನು, ಅವರು ಒಪ್ಪಿಕೊಂಡಿರುತ್ತಾರೆ. ನಂತರ ಪಂಚರಿಗೆ ಫಿನಾಫ್ತಲಿನ್ ಮತ್ತು ಸೋಡಿಯಂ ಕಾರ್ಬೊನೇಟ್ ಪುಡಿ ಹಾಗೂ ಶುದ್ಧೀಕರಿಸಿದ ನೀರಿನ ಮಹತ್ವವನ್ನು ತಿಳಿಸಿದೆನು. ಪಿರ್ಯಾದುದಾರರು ಆರೋಪಿತರಿಗೆ ಲಂಚ ಕೊಡಲು ತಂದಿದ್ದ ಹಣವನ್ನು ಹಾಜರುಪಡಿಸುವಂತೆ ಸೂಚಿಸಿದ ಮೇರೆಗೆ ಅವರು ತಲಾ 500ರೂ ಮುಖಬೆಲೆಯ 10 ನೋಟುಗಳನ್ನು ಹಾಜರುಪಡಿಸಿದರು. ಅವುಗಳನ್ನು ಚಾಸಾ-3ರವರಿಗೆ ನೀಡಿ ಅದರ ಕ್ರಮಸಂಖ್ಯೆ ಮತ್ತು ಮುಖಬೆಲೆ ಓದಿ ಹೇಳುವಂತೆ ಮತ್ತು ಚಾಸಾ-2 ರವರಿಗೆ ಅದನ್ನು ಒಂದು ಬಿಳಿ ಹಾಳೆಯಲ್ಲಿ ಬರೆದುಕೊಳ್ಳುವಂತೆ ತಿಳಿಸಿದೆನು. ಅದರಂತೆ ಚಾಸಾ-3 ರವರು ಓದಿ ಹೇಳಿದ್ದನ್ನು ಚಾಸಾ-2 ರವರು ನಿಪಿ-4ರಂತೆ ಬರೆದುಕೊಂಡರು. ಅದರಲ್ಲಿ ನನ್ನ ರುಜು ಇದ್ದು ನಿಪಿ-4(ಸಿ) ಎಂದು ಗುರುತಿಸಲಾಯಿತು. ಸದರಿ ನೋಟುಗಳಿಗೆ ಸಿಬ್ಬಂದಿ ಮೂಲಕ ಸದರಿ ನೋಟುಗಳಿಗೆ ಫಿನಾಫ್ತಲಿನ್ ಪುಡಿ ಲೇಪನ ಮಾಡಿಸಿ, ಫಿನಾಫ್ತಲಿನ್ ಪುಡಿಯನ್ನು ಮಾದರಿಯಾಗಿ ಕವರಿನಲ್ಲಿ ಸಂಗ್ರಹಿಸಿ ಖಾಕಿ ಕವರಿನಲ್ಲಿಟ್ಟು ಎನ್ ಎಂಬ ಆಂಗ್ಲ ಅಕ್ಷರದಿಂದ ಸೀಲು ಮಾಡಿ ಪಂಚರ ಸಹಿ ಇರುವ ಚೀಟಿ ಅಂಟಿಸಿ ಕ್ರಮಸಂಖ್ಯೆ 1 ಎಂದು ಗುರುತಿಸಿದೆನು. (ಮಾನ್ಯ ಸರ್ಕಾರ ವಿಶೇಷ ಅಬಿಯೋಜಕರು ಸೀಲು ಮಾಡಿದ ಪ್ಯಾಕನ್ನು ಒಡೆಯಲು ಅನುಮತಿ ಕೋರಿದ್ದು, ಅನುಮತಿ ನೀಡಿ ಒಡೆಯಲಾಯಿತು. ಮಾದರಿ ಫಿನಾಫ್ತಲಿನ್ ಪುಡಿಯನ್ನು ಎಂ.ಒ.13 ಎಂದು ಗುರುತಿಸಲಾಯಿತು. ಫಿನಾಫ್ತಲಿನ್ ಪುಡಿ ಲೇಪಿತ ನೋಟುಗಳನ್ನು ಚಾಸಾ-2 ರವರಿಗೆ ನೀಡಿದ್ದು ಅವರು ಅದನ್ನು ಎಣಿಸಿದರು. ದೂರುದಾರರ ಅಂಗಶೋಧನೆಯನ್ನು ಚಾಸಾ-3 ರವರ ಮೂಲಕ ಮಾಡಿಸಿದೆನು. ದೂರುದಾರರ ಜೇಬಿನಲ್ಲಿದ್ದ ನೂರರ 5 ನೋಟುಗಳು ಮತ್ತು 500ರ ಒಂದು ನೋಟನ್ನು ತೆಗೆಸಿ ಅದನ್ನು ಅವರ ಬಳಿ ಇದ್ದ ನೀಲಿ ಹ್ಯಾಂಡ್ ಬ್ಯಾಗ್ ನಲ್ಲಿ ಇರಿಸಲಾಯಿತು. ನಂತರ ಫಿನಾಫ್ತಲಿನ್ ಪುಡಿಲೇಪಿತ ಹಣವನ್ನು ಚಾಸಾ-2 ರವರ ಮೂಲಕ ದೂರುದಾರರ ನೇರಳೆ ಬಣ್ಣದ ಹ್ಯಾಂಡ್ ಪರ್ಸ್ ನಲ್ಲಿ ಇಡಿಸಿದೆನು. ನಂತರ ಸಿಬ್ಬಂದಿ ಮೂಲಕ ಸೋಡಿಯಂ ಕಾರ್ಬೊನೇಟ್ ದ್ರಾವಣ ತಯಾರಿಸಿದೆನು. ಅದರಲ್ಲಿ ಚಾಸಾ-3ರವರ ಕೈಬೆರಳುಗಳನ್ನು ತೊಳೆಸಿದೆನು, ಆಗ ಆ ದ್ರಾವಣ ಯಾವುದೇ ಬಣ್ಣಕ್ಕೆ ತಿರುಗಲಿಲ್ಲ. ನಂಂತರ ಅದನ್ನು ಒಂದು ಬಾಟಲಿಯಲ್ಲಿ ಸಂಗ್ರಹಿಸಿ ಪ್ಯಾಕು ಮಾಡಿ ಸೀಲು ಮಾಡಿ ವಸ್ತುಸಂಖ್ಯೆ 2 ಎಂದು ಗುರುತಿಸಿ ಪಂಚರ ಸಹಿ ಇರುವ ಚೀಟಿ ಅಂಟಿಸಿದೆನು. ಅದು ನ್ಯಾಯಾಲಯದ ಮುಂದಿರುವ ಎಂ.ಒ.6 ಆಗಿರುತ್ತದೆ. ನಂತರ ಮತ್ತೊಮ್ಮೆ ಸೋಡಿಯಂ ಕಾರ್ಬೊನೇಟ್ ದ್ರಾವಣ ತಯಾರಿಸಿ ಫಿನಾಫ್ತಲಿನ್ ಲೇಪಿತ ನೋಟುಗಳನ್ನು ಚಾಸಾ-2 ರವರ ಕೈಗೆ ಕೊಟ್ಟ ನಂತರ ಅವರ ಕೈಬೆರಳುಗಳನ್ನು ದ್ರಾವಣದಲ್ಲಿ ತೊಳೆಸಿದೆನು, ಆಗ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು. ಅದನ್ನು ಒಂದು ಬಾಟಲಿಯಲ್ಲಿ ಸಂಗ್ರಹಿಸಿ ಪ್ಯಾಕು ಮಾಡಿ ಸೀಲು ಮಾಡಿ ವಸ್ತುಸಂಖ್ಯೆ 3 ಎಂದು ಗುರುತಿಸಿ ಪಂಚರ ಸಹಿ ಇರುವ ಚೀಟಿ ಅಂಟಿಸಿದೆನು. ಅದು ನ್ಯಾಯಾಲಯದ ಮುಂದಿರುವ ಎಂ.ಒ.1 ಆಗಿರುತ್ತದೆ.

5.ನಂತರ ದೂರುದಾರರು ಹಾಜರುಪಡಿಸಿದ ಮೊಬೈಲ್ ನಲ್ಲಿದ್ದ ಧ್ವನಿಮುದ್ರಣವನ್ನು ಸಿಬ್ಬಂದಿ ಮೂಲಕ ಲ್ಯಾಪ್ ಟಾಪ್ ಗೆ ಅಳವಡಿಸಿ ಅದನ್ನು 3 ಸಿಡಿಗಳಿಗೆ ವರ್ಗಾಯಿಸಿಕೊಂಡೆನು. ಒಂದು ಸಿಡಿಯನ್ನು ಕವರಿನಲ್ಲಿ ಹಾಕಿ ಪ್ಯಾಕು ಮಾಡಿ ಸೀಲು ಮಾಡಿದೆನು ಹಾಗೂ ಪಂಚರ ಸಹಿ ಇರುವ ಚೀಟಿ ಅಂಟಿಸಿ ವಸು್ತಸಂಖ್ಯೆ 4 ಎಂದು ಗುರುತಿಸಲಾಯಿತು. ಅದನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಸಿಡಿ ನ್ಯಾಯಾಲಯದ ಮುಂದಿರುವ ನಿಪಿ-6 ಆಗಿರುತ್ತದೆ. ನಂತರ 2ನೇ ಸಿಡಿಯನ್ನು ತನಿಖೆಗಾಗಿ ಇಟ್ಟುಕೊಂಡು, 3ನೇ ಸಿಡಿಯನ್ನು ದೂರುದಾರರಿಗೆ ನೀಡಿರುತ್ತೇನೆ.

6.ನಂತರ ದೂರುದಾರರು ಲಂಚದ ಹಣ ಕೊಡಲು ಹೋದಾಗ ಧ್ವನಿಮುದ್ರಣ ಮಾಡಿಕೊಳ್ಳಲು ವಾಯ್ಸು ರೆಕಾರ್ಡರನ್ನು ದೂರುದಾರರಿಗೆ ನೀಡಿರುತ್ತೇನೆ. ವಶಪಡಿಸಿಕೊಂಡ ಎಲ್ಲಾ ವಸ್ತುಗಳಿಗೆ ಎನ್ ಎಂಬ ಅಕ್ಷರದಿಂದ ಸೀಲು ಮಾಡಿರುತ್ತೇನೆ. ಈ ಎಲ್ಲಾ ವಿಚಾರವಾಗಿ ನಿಪಿ-2 ರಂತೆ ಪಂಚನಾಮೆ ನಡೆಸಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-2(ಸಿ) ಎಂದು ಗುರುತಿಸಲಾಯಿತು. ದೂರುದಾರರಿಗೆ ಆರೋಪಿತರು ಲಂಚದ ಹಣಕ್ಕೆ ಬೇಡಿಕೆ ಇಟ್ಟಲ್ಲಿ ಮಾತ್ರ ಫಿನಾಫ್ತಲಿನ್ ಲೇಪಿತ ಹಣವನ್ನು ನೀಡುವಂತೆ ತಿಳಿಸಿದೆನು. ಆರೋಪಿತರು ಹಣ ಸ್ವೀಕರಿಸಿದಲ್ಲಿ ಹೊರಬಂದು ತಲೆಯನ್ನು ಬಲಕೈನಿಂದ ಸವರಿ ಸೂಚಿಸುವಂತೆ ತಿಳಿಸಿದೆನು. ನಂತರ ಚಾಸಾ-3 ರವರಿಗೆ ಪಿರ್ಯಾದಿಜೊತೆ ಇದ್ದು ದೂರುದಾರರು ಆರೋಪಿತರಿರಿಗೆ ಲಂಚದ ಹಣವನ್ನು ನೀಡುವಾಗ ನಡೆಯುವ ಘಟನಾವಳಿಗಳನ್ನು ಗಮನಿಸಿ ಕೇಳಿದಾಗ ತಿಳಿಸುವಂತೆ ಸೂಚಿಸಿದೆನು. ಪ್ರಾಯೋಗಿಕ ಪಂಚನಾಮೆಯ ಸಮಯದಲ್ಲಿ ಸಿಬ್ಬಂದಿಯಿಂದ ನಿಪಿ-10 ರಿಂದ ನಿಪಿ-27ರವರೆಗಿನ ಫೋಟೋ ತೆಗೆಸಿದೆನು.

7.ಅದೇ ದಿನ ಮಧ್ಯಾಹ್ನ 12-45 ಗಂಟೆಗೆ ಎಲ್ಲರನ್ನು ಕರೆದುಕೊಂಡು 2 ಇಲಾಖಾ ವಾಹನದಲ್ಲಿ ಹೊಸೂರು ಗ್ರಾಮಪಂಚಾಯಿತಿ ಕಛೇರಿ ಬಳಿ ಮಧ್ಯಾಹ್ನ 3 ಗಂಟೆಗೆ ತಲುಪಿದೆವು. ದೂರುದಾರರು ಮತ್ತು ಚಾಸಾ-3 ರವರಿಗೆ ಮತ್ತೊಮ್ಮೆ ಎಲ್ಲ ಸೂಚನೆಗಳನ್ನು ತಿಳಿಸಿ ಆರೋಪಿತರ ಕಛೇರಿಗೆ ಕಳುಹಿಸಿದೆನು. ನಾವೆಲ್ಲರೂ ಆಯಾಕಟ್ಟಿನ ಸ್ಥಳದಲ್ಲಿ ನಿಂತುಕೊಂಡೆವು. ಸುಮಾರು 4-30 ಗಂಟೆಗೆ ದೂರುದಾರರು ಮತ್ತು ಚಾಸಾ-3 ರವರು ಆರೋಪಿತರ ಕಛೇರಿಯಿಂದ ಹೊರಬಂದು ದೂರುದಾರರು ತಮ್ಮ ಬಲಗೈಯಿಂದ ತಲೆಸವರುವ ಮೂಲಕ ಸಂಜ್ಞೆ ನೀಡಿದರು. ಆಗ ನಾನು, ಸಿಬ್ಬಂದಿಗಳು ಮತ್ತು ಇನ್ನೋರ್ವ ಪಂಚ ದೂರುದಾರರು ನಿಂತಿದ್ದ ಸ್ಥಳಕ್ಕೆ ಹೋದೆವು. ಪಿರ್ಯಾದಿದಾರರು ತಾನು ಆರೋಪಿತರ ಕಛೇರಿಗೆ ಹೋದಾಗ 1ನೇ ಆರೋಪಿಗೆ ತಮ್ಮ ಕೆಲಸದ ಬಗ್ಗೆ ವಿಚಾರಿಸಿದಾ ಸದರಿಯವರು ಮಾಡುತ್ತೇನೆಂದು ತಿಳಿಸಿದರು, ನಂತರ ದೂರುದಾರರರು ಫಿನಾಫ್ತಲಿನ್ ಲೇಪಿತ ನೋಟುಗಳನ್ನು ಅವರಿಗೆ ಕೊಡಲು ಹೋದಾಗ ಸದರಿ ಆರೋಪಿತರು ಆ ಹಣವನ್ನು 2ನೇ ಆರೋಪಿತರಿಗೆ ಕೊಡುವಂತೆ ತಿಳಿಸಿದರು, ಅದರಂತೆ ತಾನು 2ನೇ ಆರೋಪಿತರಿಗೆ ಹಣ ನೀಡಿದೆನು, ಅದನ್ನು ಅವರುತೆಗೆದುಕೊಂಡು

ತಮ್ಮ ಟೇಬಲ್ ಡ್ರಾನಲ್ಲಿ ಇಟ್ಟುಕೊಂಡಿದ್ದಾಗಿ ತಿಳಿಸಿದರು. ನಂತರ ದೂರುದಾರರರನ್ನು ಕರೆದುಕೊಂಡು ಆರೋಪಿತರನ್ನು ತೋರಿಸುವಂತೆ ಕಛೇರಿ ಒಳಗೆ ಹೋದೆನು. ದೂರುದಾರರು ತೋರಿಸಿದ 1ನೇ ಆರೋಪಿತರ ಬಳಿ ಹೋಗಿ ನನ್ನ ಹಾಗೂ ಸಿಬ್ಬಂದಿಗಳ ಪರಿಚಯ ಹೇಳಿ ಅವರ ಪರಿಚಯ ಮಾಡಿಕೊಂಡು ಅವರ ಮೇಲೆ ದೂರು ದಾಖಲಾಗಿರುವ ವಿಚಾರ ತಿಳಿಸಿದೆನು. ದೂರುದಾರರು 2ನೇ ಆರೋಪಿತರನ್ನು ಸಹ ತೋರಿಸಿದ ಮೇರೆಗೆ ಅವರಿಗೂ ಪರಿಚಯ ಮಾಡಿಕೊಂಡು ದೂರಿನ ಬಗ್ಗೆ ತಿಳಿಸಿದೆನು. ನಂತರ ಆರೋಪಿತರ ಮೇಲಧಿಕಾರಿಗಳಾದ ಇಒರವರಿಗೆ ಕರೆ ಮಾಡಿ ತಿಳಿಸಿದೆನು. ಕಛೇರಿಯಲ್ಲಿದ್ದ ಹೊಸೂರು ಗ್ರಾ.ಪಂ. ಅಧ್ಯಕ್ಷರಾಗಿದ್ದಂತಹ ಚಾಸಾ-4 ರವರಿಗೆ ತನಿಖೆಗೆ ಸಹಕರಿಸುವಂತೆ ಕೇಳಿಕೊಂಡಿರುತ್ತೇನೆ. ನಂತರ ದೂರುದಾರರರನ್ನು ಆರೋಪಿತರಿಗೆ ತೋರಿಸಿ ಅವರ ಪರಿಚಯ ಇದೆಯೇ ಎಂದು ಕೇಳಿದಾಗ ಆರೋಪಿತರು ಪರಿಚಯ ಇದೆ ಎಂದು ಹೇಳಿದರು. ಅವರಿಗೆ ತನಿಖೆಗೆ ಸಹಕರಿಸುವಂತೆ ಕೇಳಿಕೊಂಡೆನು, ಅವರು ಒಪ್ಪಿಕೊಂಡರು. ಸಿಬ್ಬಂದಿ ಮೂಲಕ ಸೋಡಿಯಂ ಕಾರ್ಬೊನೇಟ್ ದ್ರಾವಣ ತಯಾರಿಸಿ, ಮಾದರಿಯಾಗಿ ಬಾಟಲಿನಲ್ಲಿ ಸಂಗ್ರಹಿಸಿ ಪ್ಯಾಕ ಮಾಡಿ ಸೀಲು ಮಾಡಿ ವಸ್ತುಸಂಖ್ಯೆ 5 ಎಂದು ಗುರುತಿಸಿದೆನು. ಅದು ಈಗ ನಾನು ನೋಡುತ್ತಿರುವ ಎಂ.ಒ.7 ಆಗಿರುತ್ತದೆ. ಮತ್ತೊಮ್ಮೆ ಸೋಡಿಯಂ ಕಾರ್ಬೊನೇಟ್ ದ್ರಾವಣ ತಯಾರಿಸಿ ಅದರಲ್ಲಿ 2ನೇ ಆರೋಪಿತರ ಬಲಗೈ ಬೆರಳುಗಳನ್ನು ಅದ್ದಿಸಿದಾಗ ಅದು ನಸುಗುಲಾಬಿ ಬಣ್ಣಕ್ಕೆ ತಿರುಗಿತು. ಅದನ್ನು ಒಂದು ಬಾಟಲಿಯಲ್ಲಿ ಶೇಖರಿಸಿ ಪ್ಯಾಕು ಮಾಡಿ ಸೀಲು ಮಾಡಿ ವಸ್ತುಸಂಖ್ಯೆ6 ಎಂದು ಗುರುತಿಸಿ ಪಂಚರ ಸಹಿ ಇರುವ ಚೀಟಿ ಅಂಟಿಸಿದೆನು. ಈಗ ನಾನು ನೋಡುತ್ತಿರುವ ಎಂ.ಒ.2 ಆಗಿರುತ್ತದೆ. ಮತ್ತೊಮ್ಮೆ ಸೋಡಿಯಂ ಕಾರ್ಬೊನೇಟ್ ದ್ರಾವಣ ತಯಾರಿಸಿ ಅದರಲ್ಲಿ 2ನೇ ಆರೋಪಿತರ ಎಡಗೈ ಬೆರಳುಗಳನ್ನು ಅದ್ದಿಸಿದಾಗ ಅದು ನಸುಗುಲಾಬಿ ಬಣ್ಣಕ್ಕೆ ತಿರುಗಿತು. ಅದನು ಒಂದು ಬಾಟಲಿಯಲ್ಲಿ ಶೇಖರಿಸಿ ಪ್ಯಾಕು ಮಾಡಿ ಸೀಲು ಮಾಡಿ ವಸ್ತುಸಂಖ್ಯೆ7 ಎಂದು ಗುರುತಿಸಿ ಪಂಚರ ಸಹಿ ಇರುವ ಚೀಟಿ ಅಂಟಿಸಿದೆನು. ಈಗ ನಾನು ನೋಡುತ್ತಿರುವ ಎಂ.ಒ.8 ಆಗಿರುತ್ತದೆ. ನಂತರ ಮತ್ತೊಮ್ಮೆ ಸೋಡಿಯಂ ಕಾರ್ಬೊನೇಟ್ ದ್ರಾವಣ ತಯಾರಿಸಿ ಅದನ್ನು ಬಾಟಲಿಯಲ್ಲಿ ಮಾದರಿಯಾಗಿ ತೆಗೆದು ವಸ್ತುಸಂಖ್ಯೆ 8 ಎಂದು ಗುರುತಿಸಿರುತ್ತೇನೆ. ಅದು ನ್ಯಾಯಾಲಯದ ಮುಂದಿರುವ ಎಂ.ಒ.9 ಆಗಿರುತ್ತದೆ. ಮತ್ತೊಮ್ಮೆ 2 ಬಟ್ಟಲುಗಳಲ್ಲಿ ಸೋಡಿಯಂ ಕಾರ್ಬೊನೇಟ್ ದ್ರಾವಣ ತಯಾರಿಸಿ ಅದರಲ್ಲಿ 1ನೇ ಆರೋಪಿತರ ಬಲಗೈ ಮತ್ತು ಎಡಗೈ ಬೆರಳುಗಳನ್ನು ಪ್ರತ್ಯೇಕವಾಗಿ ಅದ್ದಿಸಿದಾಗ ಅದು ನಸುಗುಲಾಬಿ ಬಣ್ಣಕ್ಕೆ ತಿರುಗಿತು. ಅದನ್ನು ಪ್ರತ್ಯೇಕವಾಗಿ ಬಾಟಲಿಯಲ್ಲಿ ಶೇಖರಿಸಿ ಪ್ಯಾಕು ಮಾಡಿ ಸೀಲು ಮಾಡಿ ವಸ್ತುಸಂಖ್ಯೆ9 ಮತ್ತು 10 ಎಂದು ಗುರುತಿಸಿ ಪಂಚರ ಸಹಿ ಇರುವ ಚೀಟಿ ಅಂಟಿಸಿದೆನು. ಈಗ ನಾನು ನೋಡುತ್ತಿರುವ ಎಂ.ಒ.3 ಮತ್ತು 10 ಆಗಿರುತ್ತದೆ.

8.ನಂತರ 1ನೇ ಆರೋಪಿತರಲ್ಲಿ ಲಂಚದ ಹಣ ಎಲ್ಲಿಟ್ಟುಕೊಂಡಿದ್ದೀರಿ ಎಂದು ಕೇಳಿದಾ ಆಫೀಸ್ ನ ಕಪ್ಪುಬಣ್ಣದ ಲೆದರ್ ಬ್ಯಾಗ್ ನಲ್ಲಿ 2ನೇ ಜಿಪ್ ನಲ್ಲಿ ಇಟ್ಟಿದ್ದಂತಹ ಖಾಕಿ ಬಣ್ಣದ ಕವರಿನಲ್ಲಿಟಪ್ಪಿರುವುದಾಗಿ ಹೇಳಿ ಹಾಜರುಪಡಿಸಿದರು. ಆ ಕವರ್ ನಲ್ಲಿ ಮಂಗಳಾ ವರ್ಕ್ಸ್ ಎಂದು ನೀಲಿ ಇಂಕಿನಲ್ಲಿ ಬರೆದಿತ್ತು, ಹಾಗೆಯೇ ಶುಭಾ ಗ್ರಾಫಿಕ್ಸ್ ಎಂದು ಕೆಂಪು ಬಣ್ಣದಲ್ಲಿ ಪ್ರಿಂಟ್ ಮಾಡಲಾಗಿತ್ತು. ಕವರಿನ ಒಳಗಡೆ ಇದ್ದ ಹಣ ತೆಗೆದು ಚಾಸಾ-2ರವರು ಎಣಿಸಿದಾಗ ಅದರಲ್ಲಿದ್ದ ಕ್ರಮಸಂಖ್ಯೆ ಮತ್ತು ಮುಖಬೆಲೆ ನಿಪಿ-4 ರಲ್ಲಿ ಗುರುತಿಸಿಕೊಂಡ ಕ್ರಮಸಂಖ್ಯೆ ಮತ್ತು ಮುಖಬೆಲೆಗೆ ಹೋಲಿಕೆಯಾಯಿತು. ಸದರಿ ಹಣವನ್ನು ಒಂದು ಕವರಿನಲ್ಲಿ ಹಾಕಿ ಪ್ಯಾಕು ಮಾಡಿ ಪಂಚರ ಸಹಿ ಇರುವ ಚೀಟಿ ಅಂಟಿಸಿ

ವಸ್ತುಸಂಖ್ಯೆ 11 ಎಂದು ಗುರುತಿಸಿ ವಶಪಡಿಸಿಕೊಂಡೆನು. ಅದನ್ನು ಈಗ ನೋಡುತ್ತಿದ್ದು ಅದು ಎಂ.ಒ.4 ಆಗಿರುತ್ತದೆ. ನಂದತರ ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಲು ಬಳಸಿದ್ದ ಸೋಡಿಯಂ ಕಾರ್ಬೋನೇಟ್ ಪುಡಿಯನ್ನು ಕವರಿನಲ್ಲಿ ಹಾಕಿ ಪ್ಯಾಕು ಮಾಡಿ ಸೀಲು ಮಾಡಿ ವಸ್ತುಸಂಖ್ಯೆ 12 ಎಂದು ಗುರುತಿಸಿ ವಶಪಡಿಸಿಕೊಂಡೆನು. ಅದು ಈಗ ನಾನು ನೋಡುತ್ತಿರುವ ಎಂ.ಒ.11 ಆಗಿರುತ್ತದೆ. ಶುದ್ಧೀಕರಿಸಿದ ನೀರನ್ನು ಸಹ ಬಾಟಲಿಯಲ್ಲಿ ಹಾಕಿ ಪ್ಯಾಕು ಮಾಡಿ ಸೀಲು ಮಾಡಿ ವಸ್ತುರ್ಸಂಖ್ಯೆ 13 ಎಂದು ಗುರುತಿಸಿ ವಶಪಡಿಸಿಕೊಂಡೆನು. ಅದು ಈಗ ನೋಡುತ್ತಿರುವ ಎಂ.ಒ.12 ಆಗಿರುತ್ತದೆ.

9.ನಂತರ ಲಂಚಕ್ಕಾಗಿ ಒತ್ತಾಯ ಮಾಡಿರುವ ಸಂಭಾಷಣೆಯನ್ನು ಲ್ಯಾಪ್ ಟಾಪ್ ಗೆ ಅಳವಡಿಸಿ ಹಾಜರಿದ್ದ ಚಾಸಾ-4 ರವರಿಗೆ ಧ್ವನಿ ಆಲಿಸುವಂತೆ ಹೇಳಿದೆನು, ಸದರಿಯವರು ಧ್ವನಿಯನ್ನು ಆಲಿಸಿ ಅದರಲ್ಲಿದ್ದ ಧ್ವನಿಗಳನ್ನು ಗುರುತಿಸಿ ಅದು 1 ವತ್ತು 2 ನೇ ಆರೋಪಿತರದು ಎಂದು ತಿಳಿಸಿದರು.

10.ನಂತರ 1ನೇ ಆರೋಪಿತರಿಗೆ ದೂರುದಾರರಿಗೆ ಸಂಬಂಧಿಸಿದ ದಾಖಲೆ ಹಾಜರುಪಡಿಸುವಂತೆ ತಿಳಿಸಿದೆನು. ಆಗ ಅವರು 2ನೇ ಆರೋಪಿತರ ಬಳಿ ಟೇಬಲ್ ಮೇಲೆ ಇದ್ದಂತಹ ಖಾಕಿ ಬಣ್ಣದ ಫೈಲ್ ತೆಗೆದ ಹಾಜರುಪಡಿಸಿದರು. ಅದನ್ನು ಪರಿಶೀಲಿಸಿದಾಗ ಅದರಲ್ಲಿ ದೂರುದಾರರ ತಮ್ಮ ನರೇಂದ್ರಕಮಾರ್ ಎಂಬುವವರು ನೀಡಿದ ಅರ್ಜಿ ಸೇರಿ ಒಟ್ಟು 11 ಪುಟಗಳು ಇದ್ದುದು ಕಂಡುಬಂತು. ಆ ದಾಖಲೆಗಳನ್ನು ಚಾಸಾ-4 ರವರ ಮೂಲಕ ದೃಡೀಕರಿಸಿಕೊಂಡು ಮೂಲ ದಾಖಲೆಯನ್ನು ವಾಪಸ್ ಕೊಟ್ಟೆನು. ಅದನ್ನು ನೋಡಿದರೆ ಗುರುತಿಸುತ್ತೇನೆ. ಅದು ಈಗಾಗಲೇ ಗುರುತಿಸಿರುವ ನಿಪಿ-8 ಆಗಿರುತ್ತದೆ. ದ್ರಾವಣ ತಯಾರಿಸಲು ಬಳಸಿದ್ದ ಸೋಡಿಯಂ ಕಾರ್ಬೋನೇಟ್ ಪುಡಿಯನ್ನು ಮಾದರಿಗಾಗಿ ಒಂದು ಕವರಿನಲ್ಲಿ ಹಾಕಿ ಪ್ಯಾಕು ಮಾಡಿ ಸೀಲು ಮಾಡಿ ಪಂಚರ ಸಹಿ ಇರುವ ಚೀಟಿ ಅಂಟಿಸಿ ವಸ್ತುಸಂಖ್ಯೆ 9 ಎಂದು ಗುರುತಿಸಿದೆನು. ಅದನ್ನು ಈಗ ನೋಡುತ್ತಿದ್ದು ಎಂ.ಒ.11 ಆಗಿರುತ್ತದೆ.

11.ನಂತರ ಆರೋಪಿತರ ಹಾಜರಾತಿ ದಾಖಲೆಯನ್ನು ಹಾಜರುಪಡಿಸುವಂತೆ ಚಾಸಾ-4 ರವರಿಗೆ ತಿಳಿಸಿದೆನು, ಅವರು ಹಾಜರಾತಿ ವಹಿ ಹಾಜರುಪಡಿಸಿದರು. ಅದರ ದೃಢೀಕೃತ ಪ್ರತಿ ಪಡೆದುಕೊಂಡು ಮೂಲ ದಾಖಲೆ ವಾಪಸ್ ಕೊಟ್ಟಿರುತ್ತೇನೆ. ಅದು ಈಗ ನಾನು ನೋಡುತ್ತಿರುವ ಈಗಾಗಲೇ ಗುರುತಿಸಿರುವ ನಿಪಿ-7 ಆಗಿರುತ್ತದೆ. ಆ ಮೂಲ ದಾಖಲೆಗಳನ್ನು ವಾಪಸ್ ಕೊಟ್ಟ ಬಗ್ಗೆ ಚಾಸಾ-4ರವರಿಗೆ ನಿಪಿ-54ರಂತೆ ಸ್ವೀಕೃತಿ ನೀಡಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-54(ಎ) ಎಂದು ಗುರುತಿಸಲಾಯಿತು.

12.ದೂರುದಾರರಿಗೆ ನೀಡಿದ್ದ ವಾಯ್ಸ್ ರೆಕಾರ್ಡರನ್ನು ಹಾಜರುಪಡಿಸುವಂತೆ ಕೇಳಿದಾಗ ಅವರು ಅದನ್ನು ಹಾಜರುಪಡಿಸಿ ಗಾಬರಿಯಿಂದ ತಾನು ಆನ್ ಮಾಡಲಿಲ್ಲ ಎಂದು ತಿಳಿಸಿದರು. ಘಟನಾವಳಿಯ ಬಗ್ಗೆ ಚಾಸಾ-3 ರವರನ್ನು ವಿಚಾರಿಸಿದಾಗ ಸದರಿಯವರು ದೂರುದಾರರು ಹೇಳಿದ ಮಾಹಿತಿಗೆ ಅನುಗುಣವಾಗಿ ತಿಳಿಸಿದರು.

13.1 ಮತ್ತು 2ನೇ ಆರೋಪಿತರಿಗೆ ತಮ್ಮ ಸಮಜಾಯಿಷಿ ನೀಡುವಂತೆ ತಿಳಿಸಿದೆನು. ಆಗ ಅವರು ಸಮಜಾಯಿಷಿ ನೀಡಿರುತ್ತಾರೆ. ಅದನ್ನು ಈಗ ನೋಡುತ್ತಿದ್ದು ನಿಪಿ-55 ಮತ್ತು 56 ಎಂದು ಗುರುತಿಸಲಾಯಿತು. ಅವುಗಳಲ್ಲಿ ನನ್ನ ರುಜು ಇದ್ದು ನಿಪಿ-55(ಎ) ಮತ್ತು 56(ಎ) ಎಂದು ಗುರುತಿಸಲಾಯಿತು. ಸದರಿ ಸಮಜಾಯಿಷಿ ಬಗ್ಗೆ ದೂರುದಾರರು ಮತ್ತು ಚಾಸಾ2 ಮತ್ತು 3 ರವರಲ್ಲಿ ಕೇಳಿದಾಗ ಸದರಿಯವರು ಅದನ್ನು ಒಪ್ಪಿಕೊಂಡಿರುವುದಿಲ್ಲ.

14.ನಂತರ ಸೀಲು ಮಾಡಲು ಬಳಸಿದ್ದ ಸೀಲನ್ನು 4 ಹಾಳೆಗಳಲ್ಲಿ ಪ್ರತ್ಯೇಕವಾಗಿ ಮಾದರಿಯಾಗಿ ತೆಗೆದಿರುತ್ತೇನೆ.

15.ಕೃತ್ಯಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ನಿಪಿ-9ರಂತೆ ತಯಾರಿಸಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-9(ಸಿ) ಎಂದು ಗುರುತಿಸಲಾಯಿತು. ಈ ಎಲ್ಲಾ ಪ್ರಕ್ರಿಯೆ ಸಮಯದಲ್ಲಿ ಫೋಟೋಗಳನ್ನು ತೆಗೆಸಿರುತ್ತೇನೆ. ಅವು ಈಗಾಗಲೇ ಗುರುತಿಸಿರುವ ನಿಪಿ-28 ರಿಂದ 34 ಆಗಿರುತ್ತವೆ. ಈ ಎಲ್ಲಾ ಪ್ರಕ್ರಿಯೆ ಬಗ್ಗೆ ಸ್ಥಳದಲ್ಲಿ ನಿಪಿ-3 ರಂತೆ ಪಂಚನಾಮೆ ತಯಾರಿಸಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-3(ಸಿ) ಎಂದು ಗುರುತಿಸಲಾಯಿತು. ನಂತರ ಆರೋಪಿತರನ್ನು ಮತ್ತು ವಶಪಡಿಸಿಕೊಂಡ ಮಾಲುಗಳನ್ನು ತೆಗೆದುಕೊಂಡು ಠಾಣೆಗೆ ಬಂದೆನು. ಆಗ ಸಮಯ ಸುಮಾರು ರಾತ್ರಿ 9-55 ಆಗಿತ್ತು. ರಾತ್ರಿಯಾಗಿದ್ದರಿಂದ ಪಂಚರಿಗೆ ಮರುದಿನ ಬರುವಂತೆ ತಿಳಿಸಿ ಅವರನು ಬಿಡುಗಡೆಗೊಳಿಸಿ ಕಳುಹಿಸಿದೆನ. ಆರೋಪಿತರ ಮೇಲೆ ದಸ್ತಗಿರಿ ಕ್ರಮ ಅನುಸರಿಸಿ ಸಿಬ್ಬಂದಿ ಮೂಲಕ ಬಂಧನ ಅರ್ಜಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿದೆನು. ವಶಪಡಿಸಿಕೊಂಡ ವಸ್ತುಗಳನ್ನು ಮಾಲುಪಟ್ಟಿಯಲ್ಲಿ ಸೇರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡೆನು. ಆಗಲೇ ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಧೀಶರಿಗೆ ಸಲ್ಲಿಸಿದ ಪ್ರ.ವ.ವ.ನ್ನು ತೆರೆಯುವಂತೆ ಮನವಿ ಸಲ್ಲಿಸಿದೆನು ಹಾಗೂ ಅದರಲ್ಲಿ ಭ್ರಷ್ಟಾಚಾರ ತಡೆ ಕಾಯಿದೆ ಕಲಂ 13(1)(ಡಿ) ಮತ್ತು 13(2)ನ್ನು ಸೇರಿಸಿಕೊಳ್ಳಲು ಕೇಳಿಕೊಂಡೆನು. ಸದರಿ ಮನವಿಯನ್ನು ನೋಡುತ್ತಿದ್ದು ನಿಪಿ-57 ಎಂದು ಅದರಲ್ಲಿ ನನ್ನ ರುಜು ಇದ್ದು ನಿಪಿ-57(ಎ) ಎಂದು ಗುರುತಿಸಲಾಯಿತು.

16.ದಿನಾಂಕ 14-3-17ರಂದು ಪುನಃ ಪಂಚಸಾಕ್ಷಿಗಳನ್ನು ಬರಮಾಡಿಕೊಂಡು ಅವರಿಗೆ ನಿಪಿ-2 ಮತ್ತು 3 ರ ಸಮಯದಲ್ಲಿ ತೆಗೆಸಿದ್ದ ಫೋಟೋಗಳನ್ನು ಪ್ರಿಂಟ್ ಹಾಕಿಸಿ ತೋರಿಸಿ ಅವರುಗಳು ಅದನ್ನು ಗುರುತಿಸಿದ ಮೇರೆಗೆ ಈಗಾಗಲೇ ಗುರುತಿಸಿರುವ ನಿಪಿ-35 ರಂತೆ ಪಂಚನಾಮೆ ನಡೆಸಿ ವಶಪಡಿಸಿಕೊಂಡೆನು.ಅದರಲ್ಲಿ ನನ್ನ ರುಜು ಇದ್ದು ನಿಪಿ-35(ಸಿ) ಎಂದು ಗುರುತಿಸಲಾಯಿತು. ಅದನ್ನು ಮಾಲುಪಟ್ಟಿಯಲ್ಲಿ ಸೇರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡೆನು. ನಂತರ ದೂರುದಾರರು ತಮ್ಮ ಮೊಬೈಲ್ ಲ್ಲಿ ಧ್ವನಿ ಮುದ್ರಿಸಿಕೊಂಡಿದ್ದ ಮೊಮೋರಿ ಕಾರ್ಡನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡು ನಿಪಿ-36ರಂತೆ ಪಂಚನಾಮೆ ನಡೆಸಿದನು, ಅದರಲ್ಲಿ ನನ್ನ ರುಜು ಇದ್ದು ನಿಪಿ-36(ಸಿ) ಎಂದು ಗುರುತಿಸಲಾಯಿತು. ಸದರಿ ಮೆಮೋರಿ ಕಾರ್ಡನ್ನು ಒಂದು ಪ್ಲಾಸ್ಟಿಕ್ ಕವರಿನಲ್ಲಿ ಹಾಕಿ ಪ್ಯಾಕು ಮಾಡಿ ಸೀಲು ಮಾಡಿ ವಸ್ತುಸಂಖ್ಯೆ15 ಎಂದು ಗುರುತಿಸಿರುತ್ತೇನೆ.

17.ನಂತರ ದೂರುದಾರರ ಮರುಹೇಳಿಕೆಯನ್ನು, ಚಾಸಾ-2 ರವರ ಹೇಳಿಕೆಯನ್ನು ಹಾಗೂ ಸಿಬ್ಬಂದಿಗಳಾದ ಚಾಸಾ-17, 18, 19, 20, 21, 22ರವರ ಹಾಗೂ ಚಾಸಾ-4ರವರ ಹೇಳಿಕೆಗಳನ್ನು ಮಾಡಿಕೊಂಡಿರುತ್ತೇನೆ.

18.ನಂತರ ದೂರುದಾರರು ಮೊಬೈಲ್ ಬಳಸುತ್ತಿದ್ದ ಬಗ್ಗೆ ಮತ್ತು ಅದರಲ್ಲಿ ರೆಕಾರ್ಡ್ ಮಾಡಿಕೊಂಡ ಜ್ಞಾನದ ಬಗ್ಗೆ ಅವರಿಂದ ಭಾ.ಸಾ.ಅ.ಕಲಂ.65(ಬಿ) ಅನ್ವಯ ದೃಢಪತ್ರವನ್ನು ನಿಪಿ-58ರಂತೆ ಸ್ವೀಕರಿಸಿದೆನು. ನಿಪಿ-58ರಲ್ಲಿ ನನ್ನ ರುಜು ಇದ್ದು ನಿಪಿ-58(ಎ) ಎಂದು ಗುರುತಿಸಲಾಯಿತು.

19.ಅದೇ ರೀತಿ ಚಾಸಾ-21ರವರಿಂದ ದೂರುದಾರರು ಹಾಜರುಪಡಿಸಿದ ಮೊಬೈಲನ್ನು ಮತ್ತು ಮೆಮೋರಿ ಕಾರ್ಡನ್ನು ಲ್ಯಾಪ್ ಟಾಪ್ ಗೆ ಅಳವಡಿಸುವ ಬಗ್ಗೆ ಅವರಿಗಿದ್ದ ಜ್ಞಾನ ಬಗ್ಗೆ ಮತ್ತು 22 ರವರಿಂದ ಅವರು ಪಂಚನಾಮೆ ಕಾಲದಲ್ಲಿ ಫೋಟೋ ತೆಗೆದ ಬಗ್ಗೆ ಭಾ.ಸಾ.ಅ.ಕಲಂ. 65(ಬಿ) ಅನ್ವಯ ದೃಢಪತ್ರವನ್ನು ಪಡೆದುಕೊಂಡೆನು. ಅವುಗಳನ್ನು ಈಗ ನೋಡುತ್ತಿದ್ದು ನಿಪಿ-59 ಮತ್ತು 60 ಎಂದು ನನ್ನ ರುಜುವನ್ನು ನಿಪಿ-59(ಎ) ಮತ್ತು 60(ಎ) ಎಂದು ಗುರುತಿಸಲಾಯಿತು.

20.ನಂತರ ಕೃತ್ಯಸ್ಥಳದ ನಕಾಶೆ ತಯಾರಿಸಿಕೊಡುವಂತೆ ಸಕಲೇಶಪುರ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರಿಗೆ ಮನವಿಯನ್ನು ಈಗಾಗಲೇ ಗುರುತಿಸಿರುವ ನಿಪಿ-45ರಂತೆ ಸಲ್ಲಿಸಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದುನಿಪಿ-45(ಎ) ಎಂದು ಗುರುತಿಸಲಾಯಿತು.

21.ಆರೋಪಿತರ ಸೇವಾ ವಿವರವನ್ನು ಕೋರಿ ನಿಪಿ-61ರಂತೆ ಮನವಿಯನ್ನು ಕಾರ್ಯನಿರ್ವಾಹಕ ಅಧಿಕಾರಿಗಳು ಸಕಲೇಶಪುರ ಇವರಿಗೆ ಸಲ್ಲಿಸಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-61(ಎ) ಎಂದು ಗುರುತಿಸಲಾಯಿತು.

22.ತನಿಖಾ ಕಾಲದಲ್ಲಿ ಉಪಯೋಗಿಸಿದ್ದ ಸೀಲನ್ನು ಚಾಸಾ-2 ರವರಿಗೆ ನೀಡಿ ಅವರಿಂದ ಸ್ವೀಕೃತಿ ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ನಂತರ ಸಾಕ್ಷಿದಾರರರನ್ನು ಬಿಡುಗಡೆಗೊಳಿಸಿ ಕಳುಹಿಸಿರುತ್ತೇನೆ.

23.ದಿನಾಂಕ 27-3-17ರಂದು ಆರೋಪಿತರ ಮಾದರಿ ಧ್ವನಿಯನ್ನು ಪಡೆದು ತಜ್ಞರ ಅಭಿಪ್ರಾಯಕ್ಕೆ ಕಳುಹಿಸಲು ಅನುಮತಿ ಕೋರಿ ನಿಪಿ-62ರಂತೆ ನ್ಯಾಯಾಲಯಕ್ಕೆ ನಿವೇದಿಸಿಕೊಂಡೆನು. ಅದರಲ್ಲಿ ನನ್ನ ರುಜು ಇದ್ದು ನಿಪಿ-62(ಎ) ಎಂದು ಗುರುತಿಸಲಾಯಿತು.

24.ದಿನಾಂಕ 28-3-17ರಂದು, ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಡಲು ಮನವಿ ತಯಾರಿಸಿ ಸಮುಚಿತ ಮಾರ್ಗದ ಮೂಲಕ ಕಳುಹಿಸಿರುತ್ತೇನೆ.

25.ದಿನಾಂಕ 1-4-17ರಂದು ಚಾಸಾ-7ರವರ ಹೇಳಿಕೆ ಮಾಡಿಕೊಂಡಿರುತ್ತೇನೆ.

26.ದಿನಾಂಕ 4-4-17ರಂದು ಚಾಸಾ-18ರವರಿಗೆ ವಶಪಡಿಸಿಕೊಂಡ ವಸ್ತುಗಳನ್ನು ಬೆಂಗಳೂರಿನ ಎಫ್ ಎಸ್ ಎಲ್ ಗೆ ಕೊಟ್ಟುಬರುವಂತೆ ರಹದಾರಿ ಮೂಲಕ ಕಳುಹಿಸಿರುತ್ತೇನೆ. ಸದರಿ ರಹದಾರಿಯನ್ನು ನೋಡುತ್ತಿದ್ದು ನಿಪಿ-63 ಎಂದು ಗುರುತಿಸಲಾಯಿತು. ದಿನಾಂಕ 6-4-17ರಂದು ಚಾಸಾ-18ರವರ ಹೇಳಿಕೆ ಮಾಡಿಕೊಂಡಿರುತ್ತೇನೆ.

27.ದಿನಾಂಕ 10-4-17ರಂದು ಆಲೂರು ತಾಲ್ಲೂಕು ಪಂಚಾಯಿತಿ ಕಾರ್ಯಾಲಯದಿಂದ 1ನೇ ಆರೋಪಿತರ ಸೇವಾವಿವರವನ್ನು ಈಗಾಗಲೇ ಗುರುತಿಸಿರುವ ನಿಪಿ-41 ರಂತೆ ನಿಪಿ-40ರ ಪತ್ರದೊಂದಿಗೆ ಸ್ವೀಕರಿಸಿರುತ್ತೇನೆ. ದಿನಾಂಕ 15-4-17ರಂದು ಶಿವಣ್ಣ ಪಿಡಿಒ ರವರ ಹೇಳಿಕೆ ಮಾಡಿಕೊಂಡಿರುತ್ತೇನೆ.

28.ದಿನಾಂಕ 17-4-17ರಂದು 2ನೇ ಆರೋಪಿತರ ಸೇವಾ ವಿವರವನ್ನು ಸಕಲೇಶಪುರ ತಾಲ್ಲೂಕು ಪಂಚಾಯಿತಿ ಕಾರ್ಯಾಲಯದಿಂದ ಈಗಾಗಲೇ ಗುರುತಿಸಿರುವ ನಿಪಿ-44 ರಂತೆ ಸ್ವೀಕರಿಸಿರುತ್ತೇನೆ.

29.ದಿನಾಂಕ 8-5-17 ರಂದು ಆರೋಪಿತರಿಗೆ ಮಾದರಿ ಧ್ವನಿ ಸಂಗ್ರಹಿಸಲು ಅವರಿಗೆ ನೋಟೀಸನ್ನು ನಿಪಿ-64 ಮತ್ತು 65ರಂತೆ ನೀಡಿರುತ್ತೇನೆ.

30.ದಿನಾಂಕ 10-5-17ರಂದು ಆರೋಪಿತರಿಬ್ಬರೂ ಠಾಣೆಗೆ ಹಾಜರಾದ ಮೇರೆಗೆ ಅವರ ಮಾದರಿ ಧ್ವನಿ ಸಂಗ್ರಹಿಸಲು ಪಂಚರನ್ನು ಕಳುಹಿಸುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಮನವಿಯನ್ನು ಈಗಾಗಾಲೇ ಗುರುತಿಸಿರುವ ನಿಪಿ-53ರಂತೆ ಸಲ್ಲಿಸಿರುತ್ತೇನೆ. ಅದರಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಚಾಸಾ-2 ಮತ್ತು 3ರವರನ್ನು ಕಳುಹಿಸಿರುತ್ತಾರೆ. ಅವರ ಸಮಕ್ಷಮದಲ್ಲಿ ತನಿಖಾ ಕಾಲದಲ್ಲಿ ಧ್ವನಿ ಮುದ್ರಿಸಿದ್ದನ್ನು ಆರೋಪಿತರಿಗೆ ಮೂರು ಬಾರಿ ಉಚ್ಚರಿಸುವಂತೆ ಹೇಳಿ ಅದನ್ನು ಅವ ರು ಉಚ್ಚರಿಸಿದಂತೆ ವಾಯ್ಸ್ ರೆಕಾರ್ಡರ್ ನಲ್ಲಿ ಮುದ್ರಿಸಿಕೊಂಡು ನಂತರ ಅದನ್ನು ಲ್ಯಾಪ್ ಟಾಪ್ ಗೆ ಅಳವಡಿಸಿ ಸದರಿ ಧ್ವನಿಯನ್ನು ಪಂಚರಿಗೆ ಕೇಳಿಸಿ ನಂತರ ಸದರಿ ಧ್ವನಿಗಳನು 2 ಸಿಡಿಗಳಲ್ಲಿ ಕಾಪಿ ಮಾಡಿಕೊಂಡು ಒಂದು ಸಿಡಿಯನು ತನಿಖೆಗೆ ಇಟ್ಟುಕೊಂಡು ಇನ್ನೊಂದನ್ನು ಖಾಕಿ ಕವರಿನಲ್ಲಿ ಹಾಕಿ ಚಾಸಾ-2 ರವರಿಂದ ಸೀಲು ಪಡೆದು ಸೀಲು ಹಾಕಿ ಭದ್ರಪಡಿಸಿ

ಪಂಚರ ಸಹಿ ಇರುವ ಚೀಟಿ ಅಂಟಿಸಿ ವಸ್ತುಸಂಖ್ಯೆ 16 ಎಂದು ಗುರುತಿಸಿ ವಶಪಡಿಸಿಕೊಂಡೆನು. ಸದರಿ ಸಿಡಿಯನ್ನು ಈಗ ನೋಡುತ್ತಿದ್ದು ಅದು ನ್ಯಾಯಾಲಯದ ಮುಂದಿರುವ ನಿಪಿ-38 ಆಗಿರುತ್ತದೆ. ಅದನ್ನು ವಶಪಡಿಸಿಕೊಂಡ ಬಗ್ಗೆ ಪಂಚನಾಮೆಯನ್ನು ನಿಪಿ-39ರಂತೆ ಮಾಡಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-39(ಬಿ) ಎಂದು ಗುರುತಿಸಲಾಯಿತು. ನಂತರ ಈ ಕುರಿತು ಚಾಸಾ-2 ಮತ್ತು 3 ರವರ ಮರುಹೇಳಿಕೆಗಳನ್ನು ಹಾಗೂ ಸಿಬ್ಬಂದಿ ರೂಪೇಶ್ ರವರ ಹೇಳಿಕೆ ಪಡೆದಿರುತ್ತೇನೆ. ನಂತರ ಭಾ.ಸಾ.ಅ.ಕಲಂ.65ಬಿ ಅಡಿಯಲ್ಲಿ ದೃಢಪತ್ರವನ್ನು ರೂಪೇಶ್ ರವರಿಂದ ಪಡೆದಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ನಿಪಿ-66 ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ರುಜು ಇದ್ದುನಿಪಿ-66(ಎ) ಎಂದು ಗುರುತಿಸಲಾಯಿತು. ನಂತರ ವಾಪಸ್ ಸೀಲನ್ನು ಚಾಸಾ-2 ರವರಿಗೆ ನೀಡಿರುತ್ತೇನೆ. ಅವರಿಗೆ ಸೀಲನ್ನು ನೀಡಿದ ಬಗ್ಗೆ ನೀಡಿದ 2 ಸ್ವೀಕೃತಿ ಪತ್ರಗಳನ್ನು ನೋಡುತ್ತಿದ್ದು ನಿಪಿ-67 ಮತ್ತು 68 ಎಂದು ಗುರುತಿಸಲಾಯಿತು.

31.ದಿನಾಂಕ 11-5-17ರಂದು, ಅಮಾನತ್ತುಪಡಿಸಿಕೊಂಡ ಮೆಮೋರಿ ಕಾರ್ಡ್ ಮತ್ತು ಸಿಡಿಯನ್ನು ತಜ್ಞರ ಪರೀಕ್ಷೆಗೆ ಒಳಪಡಿಸಲು ಬೆಂಗಳೂರಿನ ನ್ಯಾಯ ವಿಜ್ಞಾನ ಇಲಾಖೆಯ ನಿರ್ದೇಶಕರಿಗೆ ಪತ್ರ ಬರೆದೆನು. ಮತ್ತು ಸಮುಚಿತ ಮಾರ್ಗದಲ್ಲಿ ಕಳುಹಿಸಿದೆನು. ದಿನಾಂಕ 18-5-17ರಂದು ಅವುಗಳನ್ನು ಮಹಿಳಾ ಪೆದೆ ಪುಷ್ಪಲತಾರವರ ಮೂಲಕ ನಿಪಿ-69ರ ರಹದಾರಿಯೊಂದಿಗೆ ಕಳುಹಿಸಿಕೊಟ್ಟೆನು. ಅದರಲ್ಲಿ ನನ್ನ ರುಜು ಇದ್ದು ನಿಪಿ-69(ಎ) ಎಂದು ಗುರುತಿಸಲಾಯಿತು. 20-5-17ರಂದು ಸದರಿ ಪೇದೆ ವಾಪಸ್ ಬಂದು ಸ್ವೀಕೃತಿ ಹಾಜರುಪಡಿಸಿರುತ್ತಾರೆ. ಸದರಿ ಸ್ವೀಕೃತಿಯನ್ನು ನಿಪಿ-70 ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ರುಜು ಇದ್ದು ನಿಪಿ-70(ಎ) ಎಂದು ಗುರುತಿಸಲಾಯಿತು. ಸದರಿಯವರ ಹೇಳಿಕೆ ಮಾಡಿಕೊಂಡಿರುತ್ತೇನೆ. ಅದೇ ದಿನ ಟ್ರ್ಯಾಪ್ ಕಾಲದಲ್ಲಿ ವಿದ್ಯುತ್ ಇತ್ತೇ ಇಲ್ಲವೇ ಎಂಬ ಬಗ್ಗೆ ಮಾಹಿತಿ ನೀಡುವಂತೆ ಸಕಲೇಶಪುರ ಚೆಸ್ಕಾಂ ಎಇಇ ರವರಿಗೆ ಮನವಿಯನ್ನು ನಿಪಿ-71ರಂತೆ ಸಲ್ಲಿಸಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದುನಿಪಿ-71(ಎ) ಎಂದು ಗುರುತಿಸಲಾಯಿತು. ನಂತರ ದಿನಾಂಕ 22-5-17ರಂದು ಸದದಿರಿಯವರು ನೀಡಿದ ಮಾಹಿತಿಯನ್ನು ನಿಪಿ-72ರಂತೆ ಸ್ವೀಕರಿಸಿದೆನು. ಅದರಲ್ಲಿ ನನ್ನ ರುಜು ಇದ್ದು ನಿಪಿ-72(ಎ) ಎದು ಗುರುತಿಸಲಾಯಿತು. ಸದರಿ ಮಾಹಿತಿಯಲ್ಲಿ ಸದರಿ ದಿನದಂದು ವಿದ್ಯುತ್ ಸರಬರಾಜುಇತ್ತೆಂದು ಹೇಳಿರುತ್ತಾರೆ. ದಿನಾಂಕ 23-5-17ರಂದು ಚಾಸಾ-12ರವರ ಮತ್ತು ಸಿಬ್ಬಂದಿ ಆದಿತ್ಯ ರವರ ಹೇಳಿಕೆ ಮಾಡಿಕೊಂಡಿರುತ್ತೇನೆ.

32.ದಿನಾಂಕ 20-6-17ರಂದು ಆರೋಪಿತರು ನಗದು ಘೋಷಣೆ ಮಾಡಿದ ಬಗ್ಗೆ ಸಂಬಂಧಿಸಿದ ದೃಢೀಕೃತ ನಕಲು, ಅವರು ನೌಕರಿಗೆ ಸೇರಿದ್ದ ಬಗ್ಗೆ ನೀಡಿದ್ದ ಆದೇಶದ ದೃಢೀಕೃತ ನಕಲು, ಅವರಿಗೆ ಕಾರ್ಯಹಂಚಿಕೆಯ ಆದೇಶದ ದೃಢೀಕೃತ ನಕಲು, ಮತ್ತು ದೂರುದಾರರ ಕೆಲಸಕ್ಕೆ ಸಂಬಂಧಿಸಿದ ಕಡತ ನಂತರ ಯಾವ ಶಾಖೆಗೆ ಹೋಗಬೇಕಾಗಿತ್ತು ಎಂಬ ಬಗ್ಗೆ ಮತ್ತು ನಿವೇಶನಖಾತೆ ಸಂಬಂಧಿಸಿದಂತೆ ಎಷ್ಟು ಹಣ ಪಾವತಿಸಬೇಕಾಗಿತ್ತು ಎಂಬ ಬಗ್ಗೆ ಮಾಹಿತಿ ನೀಡುವಂತೆ ಸಕಲೇಶಪುರ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನಿಪಿ-73ರಂತೆ ಪತ್ರ ಬರೆದೆನು. ಅದರಲ್ಲಿ ನನ್ನ ರುಜು ಇದ್ದು ನಿಪಿ-73(ಎ) ಎಂದು ಗುರುತಿಸಲಾಯಿತು.

33.ದಿನಾಂಕ 10-7-17ರಂದು ಚಾಸಾ-5 ರವರಿಂದ ಮಾಹಿತಿಯನ್ನು ಈಗಾಗಲೇ ಗುರುತಿಸಿರುವ ನಿಪಿ-43 ರಂತೆ ನಿಪಿ-42 ರ ಪತ್ರದೊಂದಿಗೆ ಸ್ವೀಕರಿಸಿರುತ್ತೇನೆ. ಚಾಸಾ5 ರವರ ಹೇಳಿಕೆ ಮಾಡಿಕೊಂಡಿರುತ್ತೇನೆ.

34.ದಿನಾಂಕ 13-7-17ರಂದು ಹಾಸನ ಲೋಕಾಯುಕ್ತ ಎಸ್ ಪಿ ಕಛೇರಿಯಿಂದ ಬಂದ ರಾಸಾಯನಿಕ ವರದಿಯನ್ನು ನಿಪಿ-48ರಂತೆ ಸ್ವೀಕರಿಸಿರುತ್ತೇನೆ. ಅದೇ ದಿನ ಎಇಇ ರವರಿಂದ ಬಂದ ಕೃತ್ಯಸ್ಥಳದ ನಕಾಶೆಯನ್ನು ನಿಪಿ-46ರಂತೆ ಸ್ವೀಕರಿಸಿರುತ್ತೇನೆ.

35.ದಿನಾಂಕ 31-8-17ರಂದು ವರ್ಗಾವಣೆಯಾದ ಕಾರಣ ಪ್ರಕರಣದ ಕಡತವನ್ನು ಮುಂದಿನ ತನಿಖೆಯ ಬಗ್ಗೆ ಚಾಸಾ-24ರವರಿಗೆ ವಹಿಸಿಕೊಟ್ಟಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇದ್ದಾರೆ. ಮೆಮೋರಿ ಕಾರ್ಡನ್ನು ನೋಡುತ್ತಿದ್ದು ಅದು ಈಗಾಗಲೇ ನಿಪಿ-50 ಎಂದು ಗುರುತಿಸಲ್ಪಟ್ಟಿರುತ್ತದೆ.

**ಪಾಟೀಸವಾಲುಃ 1ನೇ ಆರೋಪಿತರ ಪರ** ಶ್ರೀ ಕೆ ಎ ಎಸ್ **ವಕೀಲರಿಂದಃ**

13-3-18ಕ್ಕಿಂತ ಮೊದಲು ದೂರುದಾರರು ನನಗೆ ಯಾವುದೇ ವಿಚಾರವನ್ನು ತಿಳಿಸಿರಲಿಲ್ಲ. ಇದಕ್ಕಿಂತ ಪೂರ್ವದಲ್ಲಿ ಈ ಕೇಸಿನ ಬಗ್ಗೆ ನನ್ನ ಜೊತೆ ಚರ್ಚೆ ಮಾಡಿಲ್ಲ. ನನಗೆ ಚಾಸಾ-1 ರವರ ತಮ್ಮ ನಳಂದ ಎಂಬುವವರ ಪರಿಚಯ ಇರುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಳಂದ ಎಂಬುವವರು ನನ ತನಿಖಾ ಕಾಲದಲ್ಲಿ ಕಛೇರಿಗೆ ಬಂದಿರಲಿಲ್ಲ. ನನ್ನ ಕಛೇರಿಗೆ ಬರುವುದಕ್ಕಿಂತ ಮೊದಲೇ ದೂರನ್ನು ಬರೆದು ತಂದಿದ್ದರು. 10-15 ಗಂಟೆಗೆ ಠಾಣೆಗೆ ಬಂದಿದ್ದರು.

2.ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ನಾನು ಎಷ್ಟು ಗಂಟೆಗೆ ಪತ್ರ ಬರೆದೆನೆಂದರೆ ಸಮಯ ನಿಖರವಾಗಿ ಹೇಳಲಾಗುವುದಿಲ್ಲ, ದೂರು ಬಂದ ತಕ್ಷಣವೇ ಬರೆದಿರುತ್ತೇನೆ. ಪ್ರ.ವ.ವ.ಯನ್ನು ನ್ಯಾಯಾಲಯಕ್ಕೆ ಕಳುಹಿಸುವ ಸಮಯದಲ್ಲಿ ಮತ್ತು ಸಾಕ್ಷಿದಾರರನ್ನು ಬಿಡುಗಡೆಗೊಳಿಸುವ ಸಮಯದಲ್ಲಿ despatch ನಂಬರನ್ನು ಬರೆದಿರುವುದಿಲ್ಲ. ನಿಪಿ-67ರಲ್ಲಿ ದಿನಾಂಕವನ್ನು ತಿದ್ದಿ ಬರೆದಿದೆ ಎಂದರೆ ಸರಿ. ಮಾದರಿ ಸೀಲನ್ನು 10-5-17ರಂದು ಮತ್ತೆ ಚಾಸಾ-2ರವರ ವಶಕ್ಕೆ ನೀಡಿರುತ್ತೇನೆ.

3.ಸಾಮಾನ್ಯವಾಗಿ ಅಂತಿಮ ವರದಿ ಸಲ್ಲಿಸುವಾಗ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡುತ್ತೇವೆ

ಎಂದರೆ ನಿಜ. ಎಲ್ಲಾ ಮಹಜರುಗಳಿಗೆ ನಾನೇ ಉಕ್ತಲೇಖನ ನೀಡಿರುತ್ತೇನೆ. 13-3-17ರಂದು ನಮ್ಮ ಕಛೇರಿಯಲ್ಲಿ ಫ್ರಾಯೋಗಿಕ ಪಂಚನಾಮೆ ನಡೆಸಿದೆನೆನ್ನುವುದು ಸುಳ್ಳು ಎಂದರೆ ಸರಿಯಲ್ಲ. ದೂರು ಕೊಡಲು ದೂರುದಾರರು ಒಬ್ಬರೇ ಬಂದಿದ್ದರು, ಅವರ ಜೊತೆ ಯಾರೂ ಬಂದಿರಲಿಲ್ಲ.

4.ನಾನು ಹೊಸೂರು ಗ್ರಾ.ಪಂ.ಗೆ ಹೋದಾಗ ಮಧ್ಯಾಹ್ನ ಸುಮರು 3-30 ಗಂಟೆ ಆಗಿತ್ತು. ನಾವು ಕೆಎ-04-1374ರ ವಾಹನದಲ್ಲಿ ಹೋದೆನು. ಅದರಲ್ಲಿ ನಾನು, ದೂರುದಾರರು ಮತ್ತು ಪಂಚಸಾಕ್ಷಿಗಳು ಇದ್ದೆವು. ನಮ್ಮ ವಾಹನವನ್ನು 200 ಮೀಟರ್ ದೂರದಲ್ಲಿ ನಿಲ್ಲಿಸಿದೆವು. ಕಚ್ಚಾ ನಕಾಶೆಯಲ್ಲಿ ನಾವು ಯಾವ ಸ್ಥ,ಳದಲ್ಲಿ ನಿಂತಿದ್ದೆವು, ವಾಹನ ಎಲ್ಲಿ ನಿಲ್ಲಿಸಿದ್ದೆವು ಎಂದು ಕಾಣಿಸಿಲ್ಲ. ನಾವು ನಿಂತ ಜಾಗಕ್ಕೆ ಆರೋಪಿತರ ಕಛೇರಿ ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಹಾಗೆಯೇ ಕಚ್ಚಾ ನಕಾಶೆಯಲ್ಲಿ 1ನೇ ಆರೋಪಿ ಎಲ್ಲಿ ಕುಳಿತಿದ್ದರು ಎಂದು ಕಾಣಿಸಿಲ್ಲ.

5.ಅರ್ಜಿಯಲ್ಲಿ ಕಾಣಿಸಿದ ಆಸ್ತಿ ದೂರುದಾರರಿಗೆ ಸಂಬಂಧಪಟ್ಟ ಆಸ್ತಿ ಅಲ್ಲ ಎಂದರೆ ಸರಿ. ಸಾಕ್ಷಿ ಅದು ಅವರ ತಮ್ಮನಿಗೆ ಸಂಬಂಧಿಸಿದ್ದು, ದೂರುದಾರರು ಅವರ ಅಧಿಕಾರ ಪತ್ರ ಹೊಂದಿದವರು ಎನ್ನುತ್ತಾರೆ. ನಳಂದಕುಮಾರ್ ರವರ ಹೇಳಿಕೆಯನ್ನು ನಾನು ಪಡೆದುಕೊಂಡಿಲ್ಲ.

6.ಪಿಡಬ್ಲ್ಯೂಡಿ ಕಛೇರಿಯವರಿಂದ ಸ್ಥಳದ ನಕಾಶೆಯನ್ನು ಈ ಕೇಸಿಗೆ ಅನುಕೂಲವಾಗುವ ರೀತಿಯಲ್ಲಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-11ರವರು ಕಚ್ಚಾ ನಕಾಶೆಯನ್ನು ತಯಾರು ಮಾಡುವ ಸಮಯದಲ್ಲಿ ನಾನು ಹಾಜರಿರಲಿಲ್ಲ.

7.ಪಂಚಾಯತ್ ನಲ್ಲಿ ಖಾತಾ ಬದಲಾವಣೆ ಮತ್ತು ಚೆಕ್ಕುಬಂದಿ ಬದಲಾವಣೆ ಮಾಡಲು ಏನು ಕ್ರಮ ಇದೆ ಎಂದು ನಾನು ತಿಳಿದುಕೊಂಡಿರುತ್ತೇನೆ.

8.ನಿಪಿ-1ರ ಜೊತೆ ದೂರುದಾರರು ಏನೂ ದಾಖಲೆ ಕೊಟ್ಟಿಲ್ಲ. ಇ-ಸ್ವತ್ತು ಮಾಡಿಕೊಡುವಂತೆ ಕಛೇರಿಗೆ ನಳಂದಕುಮಾರ್ ರವರು ಅರ್ಜಿ ಕೊಟ್ಟಿರುತ್ತಾರೆ ಎಂದರೆ ಸರಿ. ಚೆಕ್ಕುಬಂದಿ ಬದಲಾವಣೆ

ಮಾಡಿಕೊಂಡಿ ಎಂದೂ ಕೂಡ ಅರ್ಜಿಯನ್ನು ನಳಂದಕುಮಾರ್ ರವರೇ ಕೊಟ್ಟಿರುವುದು ಎಂದರೆ ಸರಿ. ಆ ಎರಡೂ ಅರ್ಜಿಗೆ ನಳಂದಕುಮಾರ್ ರವರೇ ಸಹಿ ಹಾಕಿರುವುದು ಎಂದರೆ ಸರಿ. ಚೆಕ್ಕುಬಂದಿ ಬದಲಾವಣೆ ಮಾಡುವ ಅಧಿಕಾರ EO ಗೆ ಇರುವುದು ಎಂದರೆ ನಿಜ. ಆ ಅಧಿಕಾರ ಪಿಡಿಒಗೆ ಇಲ್ಲ ಎಂದರೆ ಸರಿ. ಚೆಕ್ಕುಬಂದಿ ಸರಿಪಡಿಸಿಕೊಂಡ ನಂತರ ಖಾತೆ ಬದಲಾವಣೆ ಮಾಡಬೇಕು ಎಂದರೆ ಸರಿ. ನಿಪಿ-8ರ ಮೊದಲನೆ ದಾಖಲೆಯಲ್ಲಿ ಅದನ್ನು ಯಾರು ಸ್ವೀಕರಿಸಿದ್ದಾರೆ ಎನ್ನುವ ಬಗ್ಗೆ ನಮೂದನೆ ಇಲ್ಲ ಎಂದರೆ ನಿಜ. ಈ ದಾಖಲೆಯನ್ನು ನಿಪಿ-8(1) ಎಂದು ಗುರುತಿಸಲಾಯಿತು. ಅದೇ ರೀತಿ ಈಗ ತೋರಿಸಿದ ಇನ್ನೊಂದು ದಾಖಲೆಯಲ್ಲಿ ಕೂಡ ಅದನ್ನು ಯಾರು ಸ್ವೀಕರಿಸಿದ್ದಾರೆ ಎನ್ನುವ ಬಗ್ಗೆ ನಮೂದನೆ ಇಲ್ಲ ಎಂದರೆ ನಿಜ. ಈ ದಾಖಲೆಯನ್ನು ನಿಪಿ-8(2) ಎಂದು ಗುರುತಿಸಲಾಯಿತು. ಅರ್ಜಿ ಕೊಟ್ಟ 45 ದಿನಗಳಲ್ಲಿ ಸಕಾಲದಲ್ಲಿ ಅರ್ಜಿ ವಿಲೇವಾರಿ ಮಾಡಬೇಕು ಎಂದರೆ ಸರಿ. ಅದೇ ರೀತಿ ಈಗ ನೋಡುತ್ತಿರುವ ದಿಃ13-3-17ರ ನೋಟೀಸಿನಲ್ಲಿ ಅದನ್ನು ಯಾರು ಸ್ವೀಕರಿಸಿದ್ದಾರೆ ಎನ್ನುವ ಬಗ್ಗೆ ಕಂಡುಬರುತ್ತಿಲ್ಲ ಎಂದರೆ ನಿಜ. ಈ ದಾಖಲೆಯನ್ನು ನಿಪಿ-8(3) ಎಂದು ಗುರುತಿಸಲಾಯಿತು. ನನ್ನ ತನಿಖಾ ಕಾಲದಲ್ಲಿ ನಾನು ಚೆಕ್ಕುಬಂದಿ ಬದಲಾವಣೆಗೆ ಸಂಬಂಧಿಸಿದ ಯಾವುದೇ ಆದೇಶವನ್ನು ಪಡೆದುಕೊಂಡಿಲ್ಲ ಎಂದರೆ ನಿಜ. ಸದರಿ ದಾಖಲೆಯನ್ನು ಯಾರಿಗೆ ಕೊಟ್ಟಿದ್ದಾರೆ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ.

9.ಈ ಪ್ರಕರಣದಲ್ಲಿ ಪಿರ್ಯಾದಿಗೆ ಸಂಬಂಧಪಟ್ಟ ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದ ಒಂದು ನೀಲಿ ಬಣ್ಣದ ಬ್ಯಾಗು ಹಾಗೂ ನೀಲಿ ಬಣ್ಣದ ಪರ್ಸ್ ವಶಪಡಿಸಿಕೊಂಡಿಲ್ಲ. ಒಂದನೇ ಆರೋಪಿತರಿಂದ ಸಮಜಾಯಿಷಿಯನ್ನು ಒತ್ತಾಯಪೂರ್ವಕಾಗಿ ಪಡೆದಿರುತ್ತೇನೆ, ಅವರು ತಮ್ಮ ಸಮಜಾಯಿಷಿಯನ್ನು ಸ್ವಯಂ ಆಗಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಂತೆ ಚಾಸಾ-1 ರವರು ದೂರು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಹಾಗೆಯೇ ಫೋಟೋಗಳನ್ನು ಕೂಡ ಈ ಕೇಸಿಗೆ ಅನುಕೂಲವಾಗುವ ರೀತಿಯಲ್ಲಿ ತೆಗೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ತಯಾರಿಸಿದ ನಕ್ಷೆಗೂ ಚಾಸಾ-11ರವರು ತಯಾರಿಸಿದ ನಕ್ಷೆಗೂ ತುಂಬಾ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ.

10.ಎಂ.ಒ.3 ಮತ್ತು 10, 1ನೇ ಆರೋಪಿತರ ಕೈಬೆರಳುಗಳನ್ನು ತೊಳೆಸಿದ ದ್ರಾವಣ ಅಲ್ಲ ಎಂದರೆ ಸರಿಯಲ್ಲ. ನಾನು ಹೇಳಿಕೆ ಮಾಡಿಕೊಂಡ ರೀತಿಯಲ್ಲಿ ಯಾವುದೇ ಸಾಕ್ಷಿದಾರರು ಹೇಳಿಕೆ ನೀಡಿಲ್ಲ

ಎಂದರೆ ಸರಿಯಲ್ಲ. 1ನೇ ಆರೋಪಿತರು ಆಫೀಸ್ ನ ಕಪ್ಪು ಬಣ್ಣದ ಲೆದರ್ ಬ್ಯಾಗ್ ನ 2ನೇ ಜಿಪ್ ನಲ್ಲಿ ಇಟ್ಟುಕೊಂಡಿದ್ದ ಹಣವನ್ನು ತೆಗೆದು ಹಾಜರುಪಡಿಸಿದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

11.ನಿಪಿ-48ರಲ್ಲಿ ಮೊ.ಸಂ.10/17 ಎಂದು ಕಾಣಿಸಿದ್ದಾರೆ ಎಂದರೆ ಸರಿ. ಚಾಸಾ-4 ರವರು ಗ್ರಾಮ ಪಂಚಾಯತ್ ಅಧ್ಯಕ್ಷರಾಗಿದ್ದರು ಎಂದರೆ ಸರಿ. ಸದರಿಯವರು 1ನೇ ಆರೋಪಿತರ ಜೊತೆ ಒಳ್ಳೆಯ ಬಾಂಧವ್ಯದಲ್ಲಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. 1ನೇ ಆರೋಪಿತರುದಾಖಲೆಗಳು ಇಲ್ಲದಿದ್ದ ಸಂದರ್ಭದಲ್ಲಿ ಖಾತೆ ಬದಲಾವಣೆಗೆ ಒಪ್ಪುತ್ತಿರಲಿಲ್ಲ ಆದ್ದರಿಂದ ಅವರಿಬ್ಬರ ನಡುವೆ ಚರ್ಚೆಗಳು ನಡೆಯುತ್ತಿದ್ದವು ಎದಂರೆ ಗೊತ್ತಿಲ್ಲ. 1ನೇ ಆರೋಪಿ ಈ ಪ್ರಕರಣದಲ್ಲಿ ಭಾಗಿಯಾಗದಿದ್ದರೂ ಸಹ ಸದರಿ ಚಾಸಾ-4 ರವರ ಮಾತುಕೇಳಿಕೊಂಡು ಅವರ ಮೇಲೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಆರೋಪಿಯಿಂದ 5000ರೂಪಾಯಿ ಹಣವನ್ನು ವಶಪಡಿಸಿಕೊಂಡಿದ್ದೇವೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ-3ನ್ನು ಲೋಕಾಯುಕ್ತ ಠಾಣೆಯಲ್ಲಿ ಮಾಡಿದ್ದು ಎಂದರೆ ಸರಿಯಲ್ಲ. ತನಿಖಾ ಕಾಲದಲ್ಲಿ 1ನೇ ಆರೋಪಿ ಯಾವುದೇ ತಪ್ಪು ಮಾಡಿಲ್ಲ ಎಂದು ಕಂಡುಬಂದಿದ್ದರೂ ಸಹ ಅವರ ಮೇಲೆ ಸುಳ್ಳು ಕೇಸು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ** 2ನೇ **ಆರೋಪಿತರ ಪರ** ಶ್ರೀ ಹೆಚ್ ಎಲ್ ಡಿ **ವಕೀಲರಿಂದಃ**

ನಿಪಿ-1 ರಲ್ಲಿ ತಮ್ಮನ ಪರವಾಗಿ ಅರ್ಜಿ ಕೊಟ್ಟಿರುವುದು ಎಂದು ಕಾಣಿಸಿರುತ್ತಾರೆ. ಅವರು ಆ ರೀತಿ ಅರ್ಜಿ ಕೊಟ್ಟ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಗ್ರಾಮ ಪಂಚಾಯಿತಿಯಿಂದ ಪಡೆದಿಲ್ಲ. ಚಾಸಾ-1 ರವರು ತಮ್ಮನ ಪರವಾಗಿ ತಾವು ಸಹಿ ಹಾಕಿ ಕೊಟ್ಟಿರುವ ಅರ್ಜಿಯನ್ನು ನಾನು ಗ್ರಾ.ಪಂ.ಯಿಂದ ಪಡೆದಿಲ್ಲ.

2.ಫಿನಾಫ್ತಲಿನ್ ಪುಡಿಯನ್ನು ನೋಟಿಗೆ ಹಚ್ಚಿದ ನಂತರ ಅದನ್ನು ಎಣಿಸಿ ನೋಡಿದಲ್ಲಿ ಆ ಪುಡಿ ಬಿದ್ದುಹೋಗುವ ಸಾಧ್ಯತೆ ಇದೆ ಎಂದರೆ ಸರಿಯಲ್ಲ. ನಿಪಿ-3 ರಲ್ಲಿ 2ನೇ ಆರೋಪಿತರು ದುಡ್ಡು ಎಣಿಸಿದರು ಎನ್ನುವ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ಹಣ ಇಟ್ಟಿದ್ದ ಕವರಿಗೆ ಫಿನಾಫ್ತಲಿನ್ ಪುಡಿ ಹಚ್ಚಿಸಿಲ್ಲ ಎಂದರೆ ಸಾಕ್ಷಿಯು ನಾವು ಹಣಕ್ಕೆ ಫಿನಾಫ್ತಲಿನ್ ಪುಡಿ ಹಚ್ಚಿರುವುದು, ಅದನ್ನೇ ಕೊಟ್ಟಿರುವುದು, ಕವರ್ ಕೊಟ್ಟಿಲ್ಲ ಎನ್ನುತ್ತಾರೆ.

3.ಮೊಬೈಲ್ ರೆಕಾರ್ಡನ್ನು ಚಾಸಾ-2 ಮತ್ತು 3 ರವರಿಗೆ ಕೇಳಿಸಿದ ತಕ್ಷಣವೇ ಅದನ್ನು ವಶಪಡಿಸಿಕೊಳ್ಳಲು ತೊಂದರೆ ಇರಲಿಲ್ಲ. ಆ ಸಂಭಾಷಣೆಯು ದೂರುದಾರರ ಮೊಬೈಲ್ ನಲ್ಲೇ ರೆಕಾರ್ಡ್ ಆಗಿದ್ದೋ ಅಥವಾ ಬೇರೆಯವರ ಮೊಬೈಲ್ ನಲ್ಲಿ ರೆಕಾರ್ಡ್ ಆಗಿದ್ದನ್ನು ಇವರ ಮೊಬೈಲ್ ಗೆ ಹಾಕಿಸಿಕೊಂಡಿರುವುದೋ ಎನ್ನುವುದನ್ನು ತನಿಖೆ ಮಾಡಿದ್ದೀರೋ ಎಂದರೆ ಸಾಕ್ಷಿಯು ಅವರ ಅವರ ಮೊಬೈಲ್ ನಲ್ಲೇ ರೆಕಾರ್ಡ್ ಮಾಡಿದ್ದು ಎಂದು ಹೇಳಿರುತ್ತಾರೆ, ಆದ್ದರಿಂದ ತನಿಖೆ ಮಾಡಿಲ್ಲ ಎನ್ನುತ್ತಾರೆ. ದೂರುದಾರರ ಮೊಬೈಲ್ ನಲ್ಲಿ ರೆಕಾರ್ಡ್ ಮಾಡುವಂತಹ ಅನುಕೂಲತೆ ಇತ್ತು ಎನ್ನುವ ಬಗ್ಗೆ ಮಹಜರಿನಲ್ಲಿ ನಮೂದು ಮಾಡಿಲ್ಲ. ದೂರುದಾರರು ತೋರಿಸಿದ ಮೊಬೈಲ್ ನಲ್ಲಿ ಮೆಮೊರಿ ಕಾರ್ಡ್ ಇತ್ತು ಎನ್ನುವ ಬಗ್ಗೆ ಮಹಜರಿನಲ್ಲಿ ಕಾಣಿಸಿಲ್ಲ ಎಂದರೆ ಸರಿ.

4.ಸಾಮಾನ್ಯ ಅಧಿಕಾರ ಪತ್ರದಲ್ಲಿ ನಳಂದ ರವರುದೂರುದಾರರಿಗೆ ಖಾತೆ ಬದಲಾವಣೆಗೆ ಸಂಬಂಧಪದಟ್ಟಂತೆ ಯಾವುದೇ ಅಧಿಕಾರ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ ಅಧಿಕಾರ ಪತ್ರವನ್ನು ನಾನು ಪಡೆದುಕೊಂಡಿಲ್ಲ. ಅದನ್ನು ನಾನು ಪರಿಶೀಲನೆ ಸಹ ಮಾಡಿಲ್ಲ.

5.ಯಾವುದೇ ಅರ್ಜಿ ಕೊಟ್ಟಾಗ ಅದಕ್ಕೆ ಇನ್ವರ್ಡ್ ನಂಬರ್ ಹಾಕುತ್ತಾರೆ ಎಂದರೆ ನಿಜ. ನಿಪಿ-8(1) ಮತ್ತು 8(2)ರಲ್ಲಿ ಇನ್ವರ್ಡ್ ನಂಬರ್ ಇಲ್ಲ ಎಂದರೆ ಸರಿ. ಹಾಗೆಯೇ ದಿನಾಂಕ ಕೂಡ ನಮೂದಿಸಿಲ್ಲ ಎಂದರೆ ಸರಿ. ಈ ಎರಡೂ ವಿಚಾರವಾಗಿ ನಾನು ತನಿಖೆ ಮಾಡಿಲ್ಲ ಎಂದರೆ ಸಾಕ್ಷಿಯು ದೂರುದಾರರನ್ನು ಕೇಳಿದಾಗ ತಾನು ನಮೂದು ಮಾಡಿಲ್ಲ ಎಂದು ಹೇಳಿದರು ಎನ್ನುತ್ತಾರೆ. ಈ ದಾಖಲೆಗಳನ್ನು ಸೃಷ್ಟಿಸಿದ್ದು ಎಂದರೆ ಸರಿಯಲ್ಲ. ನಳಂದ ರವರು ಆರ್ಮಿಯಲ್ಲಿ ಕೆಲಸ ಮಾಡುತ್ತಿದ್ದರು ಎನ್ನುವ ಬಗ್ಗೆ ನಾನು ದಾಖಲೆ ಪಡೆದಿಲ್ಲ. ನಿಪಿ-8(1) ಮತ್ತು 8(2)ರ ಅರ್ಜಿ ಕೊಟ್ಟ ಸಂದರ್ಭದಲ್ಲಿ ನಳಂದ ರವರು ರಜೆ ಹಾಕಿಕೊಂಡು ಬಂದಿದ್ದರು ಎನ್ನುವ ಬಗ್ಗೆ ನಾನು ಯಾವುದೇ ದಾಖಲೆ ಪಡೆದಿಲ್ಲ. ನನ್ನ ತನಿಖಾ ಕಾಲದಲ್ಲಿ ನಾನು ದೂರುದಾರರಿಗೆ ನಳಂದರವರು ಖಾತೆ ಮಾಡಲು ಮತ್ತು ಚೆಕ್ಕುಬಂದಿ ಬದಲಾವಣೆ ಮಾಡುವ ಬಗ್ಗೆ ಅಧಿಕಾರ ಪತ್ರ ಕೊಟ್ಟಿದ್ದರು ಎನ್ನುವ ಬಗ್ಗೆ ಅವರನ್ನು ವಿಚಾರಣೆ ಮಾಡಿ ಹೇಳಿಕೆ ಮಾಡಿಕೊಂಡಿಲ್ಲ.

6.ನೀತುರವರು ಬಳಸುತ್ತಿದ್ದರೆಂದು ಹೇಳುವ ಫೋನ್ ಅವರ ಹೆಸರಿನಲ್ಲಿರಲಿಲ್ಲ ಎಂದರೆ ನಿಜ. ಆ

ಸಿಮ್ ಯಾರಹೆಸರಿನಲ್ಲಿತ್ತೋ ಅವರನ್ನು ನಾನು ವಿಚಾರಣೆ ಮಾಡಿಲ್ಲ ಎಂದರೆ ನಿಜ. ಹಾಗೆಯೇ ನೀತುರವರು ಬಳಸುತ್ತಿದ್ದ ಮೊಬೈಲನ್ನು ಎಲ್ಲಿ ಖರೀದಿ ಮಾಡಿದ್ದರು ಎನ್ನುವ ಬಗ್ಗೆ ವಿಚಾರಣೆ ಮಾಡಿಲ್ಲ. ನನ್ನ ತನಿಖಾ ಕಾಲದಲ್ಲಿ ನಾನು ಖಾತಾ ಬದಲಾವಣೆ ಮತ್ತು ಚೆಕ್ಕುಬಂದಿ ಬದಲಾವಣೆ ಬಗ್ಗೆ ಎಷ್ಟು ಫೀ ಕಟ್ಟಿದ್ದಾರೆಎನ್ನುವ ಬಗ್ಗೆ ತನಿಖೆ ಮಾಡಿಲ್ಲ. ಈ ಎರಡೂ ಕೆಲಸಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಕಟ್ಟಬೇಕಾದ ಹಣವನ್ನು ಕಟ್ಟಿನಂತರ ಅರ್ಜಿ ಸಲ್ಲಿಸಬೇಕು ಎಂದರೆ ಸರಿಯಲ್ಲ. ಖಾತಾ ಬದಲಾವಣೆಗೆ ಅರ್ಜಿ ಕೊಡುವಾಗ ಸಾಮಾನ್ಯವಾಗಿ ಫೀ ಕಟ್ಟಿಯೇ ಕೊಡುವುದು ಎಂದರೆ ನನಗೆ ಗೊತ್ತಿಲ್ಲ. ನಿಪಿ-8(1) ಮತ್ತು (2)ಕ್ಕೆ ಸಂಬಂಧಿಸಿದಂತೆ ಫೀ ಕಟ್ಟಿದ್ದಾರೋ ಎನ್ನುವ ಬಗ್ಗೆ ನನ್ನ ತನಿಖಾ ಕಾಲದಲ್ಲಿ ನಾನು ಯಾವುದೇ ದಾಖಲೆ ಪಡೆದಿಲ್ಲ. ನಂತರದಲ್ಲಿ ಅದೇ ಅರ್ಜಿಯ ಮೇಲೆ ನಳಂದರವರ ಹೆಸರಿಗೆ ಖಾತೆಯಾಗಿದೆ ಎಂದರೆ ಗೊತ್ತಿಲ್ಲ. ದೂರುದಾರರು 2ನೇ ಆರೋಪಿತರಿಗೆ ಹಣ ಕೊಟ್ಟರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ದೂರುದಾರರು 2ನೇ ಆರೋಪಿತರಿಗೆ ಹಣ ಕೊಟ್ಟದ್ದೂ ಇಲ್ಲ ಅವರು ಅದನ್ನು ಸ್ವೀಕರಿಸಿದ್ದೂ ಇಲ್ಲ ಎಂದರೆ ಸರಿಯಲ್ಲ.

7.ವಾಯ್ಸ್ ರೆಕಾರ್ಡನ್ನು ಈ ಕೇಸಿಗೋಸ್ಕರ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಮಾದರಿ ಧ್ವನಿಗಳನ್ನು ಆರೋಪಿತರು ಯಾರೂ ಕೊಟ್ಟಿಲ್ಲ, ಅದನ್ನು ನಾನು ಈ ಕೇಸಿಗೋಸ್ಕರ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. 2ನೇ ಆರೋಪಿತರು ಯಾವುದೇ ರೀತಿಯಲ್ಲಿ ಹಣ ಸ್ವೀಕರಿಸದಿದ್ದರೂ ಸಹ ಸರಿಯಾಗಿ ತನಿಖೆ ನಡೆಸದೆ ಸುಳ್ಳು ಕೇಸು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗೆಯೇ ಆಕೆಯಾವುದೇ ರೀತಿಯಲ್ಲೂ ಸಮಜಾಯಿಷಿ ಕೊಟ್ಟಿಲ್ಲ, ಅದನ್ನು ಅನುಕೂಲಕ್ಕೆ ತಕ್ಕಂತೆ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

(ಉಳಿದಂತೆ 1ನೇ ಆರೋಪಿತರ ಪರ ಮಾಡಿದ ಪಾಟೀಸವಾಲನ್ನು ಅಳವಡಿಸುವುದಾಗಿ ಹೇಳುತ್ತಾರೆ, ಅನುಮತಿಸಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**